**ಸಿ.ಸಿ. ನಂಬ್ರ: 1982/2014** **CW-1**

ದಿನಾಂಕ: 06.03.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:</u>**

1ನೇ ಆರೋಪಿ 4 ನೇ ಆರೋಪಿಯ ಗಂಡ, 2ನೇ ಆರೋಪಿ ನನ್ನ ಅಕ್ಕನ ಮಗಳು, 3ನೇ ಆರೋಪಿ ನನ್ನ ಅಕ್ಕನ ಮಗ. 4ನೇ ಆರೋಪಿ ನನ್ನ ಅಕ್ಕ.

ಆರೋಪಿತರು ನನ್ನ ವಿರುದ್ದ ಒಂದು ಪ್ರಕರಣವನ್ನು ದಾಖಲಿಸಿ ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಅದರಲ್ಲಿ 1ನೇ ಆರೋಪಿ ಪಿರ್ಯಾದುದಾರರು ಎಂದರೆ ಸರಿ. ಚಾಸಾ-2 ನನ್ನ ತಮ್ಮ. ಮನೆ ವಿಚಾರದಲ್ಲಿ ನಮ್ಮ ನಡುವೆ ತಕರಾರು ಇದೆ. ನಮ್ಮ ತಂದೆ ಕೊಗ್ಗ ಮಾಸ್ಟರ್. ನಾವು 5 ಹೆಣ್ಣು, 3 ಗಂಡು ಮಕ್ಕಳು ಎಂದರೆ ಸರಿ. ಗಿರಿಜಾ, ರತ್ನಾ, ವನಜಾ, ಬೇಬಿ, ಜಯಶಂಕರ, ಸಂತೋಷ, ಅರುಣ ಮತ್ತು ವಸಂತಿ-ನಾನು ಎಂದರೆ ಸರಿ. ನಮ್ಮ ತಂದೆ ತೀರಿ ಹೋದ ನಂತರ ನಮ್ಮ ಮನೆಯ ದಾಖಲಾತಿಗಳನ್ನು ತಾಯಿಯಾದ ದೇವಿರವರ ಹೆಸರಿನಲ್ಲಿ ಮಾಡಿಕೊಂಡಿರುತ್ತೇವೆ. ಒಟ್ಟು 98 ಸೆಂಟ್ಸ್ ಜಾಗ ಮತ್ತು ಮನೆ ಇದೆ. ಸದ್ರಿ ಜಾಗದ ಮೇಲೆ ನನ್ನ ತಂದೆ ಕೊಗ್ಗ ಮಾಸ್ಟರ್ ರವರ ಎಲ್ಲಾ ಮಕ್ಕಳಿಗೂ ಹಕ್ಕು ಇದೆ ಎಂದರೆ ಸರಿ.

ಸದ್ರಿ ಮನೆಯ ಒಂದು ಭಾಗದಲ್ಲಿ ನಾನು ಇದ್ದು ಶೇಕಡ 99 ರಷ್ಟು ಭಾಗದಲ್ಲಿ ಆರೋಪಿತರೇ ಇರುತ್ತಾರೆ. ನಾವು ಪ್ರತ್ಯೇಕವಾಗಿ ಅಡುಗೆ ಮಾಡಿಕೊಂಡು ಜೀವನ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಈ ಪ್ರಕರಣ ದಾಖಲಾದ ನಂತರ ದಿ: 31-01-2018ರಂದು ಅವರು ಸಾಲಿಗ್ರಾಮಕ್ಕೆ ಸ್ಥಳಾಂತರಗೊಂಡಿರುತ್ತಾರೆ. 1ನೇ ಆರೋಪಿ ನಿವೃತ್ತ ಅರಣ್ಯ ಅಧಿಕಾರಿ ಎಂದರೆ ಸರಿ. ಅವರ ಒಬ್ಬಳು ಮಗಳು ಮಂಗಳೂರಿನಲ್ಲಿ ವಕೀಲೆ ಎಂದರೆ ಸರಿ. 3ನೇ ಆರೋಪಿ ವ್ಯವಹಾರ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಅರುಣ್ ಬೆಳಗಾಂನಲ್ಲಿ ವೈದ್ಯರಾಗಿರುತ್ತಾರೆ. ಮನೆಯಲ್ಲಿ ನಾನು ಒಬ್ಬಳೇ ವಾಸವಾಗಿದ್ದೇನೆ ಎಂದರೆ ಸರಿ.

ಗಲಾಟೆ ಮನೆಯ ಒಳಗೆ ರೂಂನಲ್ಲಿ ಪ್ರಾರಂಭವಾಗಿರುತ್ತದೆ. 1ನೇ ಆರೋಪಿ ಅರೆ ಬೆತ್ತಲೆಯಾಗಿ ತಿರುಗುತ್ತಿದ್ದ ಬಗ್ಗೆ ನಾನು ಪ್ರಶ್ನಿಸಿದ ಕಾರಣ ಎಲ್ಲರೂ ಗಲಾಟೆ ಮಾಡಿರುತ್ತಾರೆ. 4ನೇ ಆರೋಪಿ ರಾಡ್ ನಿಂದ ಎಡಭುಜಕ್ಕೆ, 2ನೇ ಆರೋಪಿ ಕತ್ತಿಯಿಂದ ಎಡತಲೆ ಮತ್ತು ಎಡಭುಜಕ್ಕೆ ಹೊಡೆದಿರುತ್ತಾರೆ. ಆಗ ಎಡಭುಜದ ಮೂಳೆ ಮುರಿದಿತ್ತು. 1 ಮತ್ತು 3ನೇ ಆರೋಪಿ ಹೊಡೆದಿರುವುದಿಲ್ಲ. 3ನೇ ಆರೋಪಿ ಕುತ್ತಿಗೆಯನ್ನು ಒತ್ತಿ ಹಿಡಿದು ಮನೆಯ ಒಳಗೆನಿಂದ 1 ಫರ್ಲಾಂಗು ದೂರು ಹೊರಗಿನವರಿಗೂ ಎಳೆದುಕೊಂಡು ಬಂದಿರುತ್ತಾನೆ. ಮಧ್ಯಾಹ್ನ 12-30 ರಿಂದ 4-30ರವರೆಗೂ ಗಲಾಟೆ ಮಾಡಿರುತ್ತಾರೆ.

ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ನನ್ನ ಕುತ್ತಿಗೆ ಒತ್ತಿ ಹಿಡಿದ ಕಾರಣ ನನಗೆ ಕೂಗಲು ಆಗಿರಲಿಲ್ಲ. 1ನೇ ಆರೋಪಿ ಕೈಯನ್ನು ಹಿಂದಕ್ಕೆ ಹಿಡಿದು ಗಟ್ಟಿಯಾಗಿ ಹಿಡಿದಿರುತ್ತಾರೆ. ಗಲಾಟೆಯಿಂದ ನನಗೆ ಪ್ರಜ್ಞೆ ತಪ್ಪಿತ್ತು. ಗಲಾಟೆಯನ್ನು ಬೇರೆ ಯಾರೂ ನೋಡಿರುವುದಿಲ್ಲ. ಅನಂತರ ನನ್ನನ್ನು ಕೋಳಿ ಸಾಕಿದ ಗೂಡಿನ ಅಡಿಗೆ ಬೀಸಾಡಿರುತ್ತಾರೆ. ಅನಂತರ ನಾನು ನನ್ನ ಅಣ್ಣನಾದ ಡಾಕ್ಟರ್ ಅರುಣ್ ಕುಮಾರ್ ರವರಿಗೆ ಕರೆ ಮಾಡಿ ಹೇಳಿರುತ್ತೇನೆ. ಅ ನಂತರ ನನ್ನ ಅಕ್ಕ ವನಜಾಕ್ಷಿ ಬಂದು ಸಂಜೆ 6-30ರ ವೇಳೆಗೆ ನನ್ನನ್ನು ರಿಕ್ಷಾದಲ್ಲಿ ಕುಂದಾಪುರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ರಾಡ್ ಮತ್ತು ತಲವಾರನ್ನು ಏನು ಮಾಡಿದ್ದರು ಎಂದು ನನಗೆ ಪ್ರಜ್ಞೆ ತಪ್ಪಿದ ಕಾರಣ ತಿಳಿದು ಬಂದಿಲ್ಲ.

ಅಂಗಳದಲ್ಲಿ ರಕ್ತ ಬಿದ್ದಿತ್ತು. ಅದೇ ದಿನ ನನ್ನ ಅಣ್ಣ ಕರೆ ಮಾಡಿ ತಿಳಿಸಿದ್ದರೂ ಚಾಸಾ-6 ರವರು ದೂರನ್ನು ಸ್ವೀಕರಿಸಿರುವುದಿಲ್ಲ. ಅನಂತರ ಡಿ ವೈ ಎಸ್ ಪಿ ರವರಿಗೆ ಮಾರನೇ ದಿನ ದೂರು ನೀಡಿರುತ್ತೇವೆ. ದೂರನ್ನು ನಾರಾಯಣ ಸ್ವಾಮಿ ಪೊಲೀಸ್ ಪೇದೆ ಮನೆಯಲ್ಲಿ ಬರೆದಿರುತ್ತಾರೆ. ನಾನು ಹೇಳಿದ ವಿಚಾರದಲ್ಲಿ ಯಾವುದನ್ನು ಬರೆದುಕೊಂಡಿದ್ದಾರೆ ಎಂದು ನನಗೆ ತಿಳಿದಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ಸಹಿ ಮಾಡುತ್ತೇನೆ. ನಿಪಿ-1ರಲ್ಲಿ ನಾನು ಇಂಗ್ಲೀಷ್‌ನಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1ನ್ನು ನನಗೆ ಓದಲು ಕೊಟ್ಟಿರುವುದಿಲ್ಲ. ಸಹಿ ಪಡೆದು ಅದನ್ನು ತೆಗೆದುಕೊಂಡು ಹೋಗಿರುತ್ತಾರೆ. ಪೊಲೀಸರ ಎದುರು 1 ಸಹಿ ಮಾಡಿರುತ್ತೇನೆ. ಆದ್ದರಿಂದ ನಿಪಿ-1 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ತಿಳಿದಿಲ್ಲ.

ನಾನು ಒಂದು ದಿನ ಕುಂದಾಪುರ ಸರಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ನನ್ನನ್ನು ಸಂಪರ್ಕಿಸಿರುತ್ತಾರೆ. ಅಲ್ಲಿ ನಾನು ಹೇಳಿಕೆ ನೀಡಿರುತ್ತೇನೆ. ದೂರು ನೀಡಿದ

ನಂತರ ಪೊಲೀಸರು ಪಂಚನಾಮೆಗೆ ಬಂದಿರುತ್ತಾರೆ. ಆಗ 11 ರಿಂದ 11-30 ಆಗಿರಬಹುದು. ಸದ್ರಿ ದಿನ ಪಂಚನಾಮೆಗೆ ನನ್ನೊಂದಿಗೆ ಬೇರೆ ಯಾರೂ ಸಹಿ ಮಾಡಿಲ್ಲ. ನಿಪಿ-2ಕ್ಕೂ ನಾನೇ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿಲ್ಲ. ಸ್ಥಳದಲ್ಲಿ ರಕ್ತದ ಕಲೆ ಇತ್ತು. ಅದನ್ನು ಪೊಲೀಸರು ನೋಡಿರುತ್ತಾರೆ. ನಾನು ಮೇಲೆ ಹೇಳಿದ ಗಾಯಗಳಿಗೆ ಒಳಗಾಗಿದ್ದೆ ಎಂದು ಕುಂದಾಪುರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರು ಪರಿಶೀಲಿಸಿ ಚಿಕಿತ್ಸೆ ಮಾಡಿರುತ್ತಾರೆ.

ಪೊಲೀಸರು ಸದ್ರಿ ಗಾಯಗಳು ಹೇಗೆ ಆಯಿತು ಎಂದು ನನ್ನನ್ನು ವಿಚಾರಿಸಿಲ್ಲ. ವೈದ್ಯರಿಗೆ ನನ್ನ ಅಕ್ಕ, ಭಾವ ಮತ್ತು ಅವರ ಮಕ್ಕಳು ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ ಹೋಗಿಲ್ಲ. ನಿಪಿ-1 ಮತ್ತು 2ಕ್ಕೆ ಗಂಗೊಳ್ಳಿ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು 1ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದು, ಆತ ನನ್ನ ವಿರುದ್ದ ಪ್ರಕರಣವನ್ನು ದಾಖಲಿಸುತ್ತಾನೆ ಎಂಬ ಭಯದಲ್ಲಿ ನಾನು ಮನೆಯ ಅಂಗಳದಲ್ಲಿ ಬಿದ್ದು ಆಗಿದ್ದ ಗಾಯವನ್ನು ದುರಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿತರು ಸದ್ರಿ ದಿನ ನನ್ನ ಮೇಲೆ ಹಲ್ಲೆ ಮಾಡಿ, ಅವಾಚ್ಯವಾಗಿ ನಿಂಧಿಸಿ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಸದ್ರಿ ಮನೆಯಲ್ಲಿ ವಾಸವಿರಬಾರದೆಂದು ನಾನು ಆಗಾಗ ಗಂಗೊಳ್ಳಿ ಠಾಣೆಯಲ್ಲಿ ದೂರು ನೀಡುತ್ತಿದ್ದು, ಅವರು ಮನೆಯಿಂದ ಹೊರಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ವೈದ್ಯರಾಗಿದ್ದು ಪೊಲೀಸರ ಮೇಲೆ ಒತ್ತಡ ಹೇರಿ ನನ್ನ ಮೇಲೆ ದಾಖಲಾಗಿದ್ದ ಪ್ರಕರಣಕ್ಕೆ ಪ್ರತಿಯಾಗಿ ಆರೋಪಿತರ ವಿರುದ್ದ ಈ ಸುಳ್ಳು ಪ್ರಕರಣವನ್ನು ದಾಖಲಾಗುವಂತೆ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ